# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಶರವಣ ಟಿ.ಎ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1077 |
| ಉತ್ತರಿಸಬೇಕಾದ ದಿನಾಂಕ | 20.08.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2023-24 ರಿಂದ ಇಲ್ಲಿಯವರೆಗೆ ಕೇಂದ್ರ ಪುರಸ್ಕೃತ ಮತ್ತು ರಾಜ್ಯ ಪುರಸ್ಕೃತ ಯೋಜನೆಯಲ್ಲಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ಯೋಜನೆವಾರು ಮಾಹಿತಿ ನೀಡುವುದು) | 2023-24 ರಿಂದ ಪುಸ್ತಕ ಸಾಲಿನವರೆಗೆ ಆಯವ್ಯಯದಲ್ಲಿ ರಾಜ್ಯ ವಸತಿ ಯೋಜನೆಗಳಡಿ ಹೊಸ ಮನೆಗಳ ಗುರಿ ನಿಗಧಿಪಡಿಸಿರುವುದಿಲ್ಲ. ಆದರೆ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಕಾಮಗಾರಿ ಆದೇಶ ನೀಡಿ 1 ರಿಂದ 2 ವರ್ಷಕಾಲಾವಕಾಶ ನೀಡಿದ ನಂತರವೂ ಪ್ರಾರಂಭವಾಗದ ಮನೆಗಳನ್ನು ರದ್ದುಪಡಿಸಿ ಕೆಲವೊಂದು ವಿಧಾನಸಭಾ ಕ್ಷೇತ್ರ/ಗ್ರಾಮಪಂಚಾಯ್ತಿಗಳಿಗೆ ಮರುಹಂಚಿಕೆ ಮಾಡಲಾಗಿರುತ್ತದೆ. |
| ಆ) | ನಿಗದಿ ಯಾದ ಗುರಿಗೆ ಎದುರಾಗಿ ಸಾಧಿಸಿದ ಪ್ರಗತಿ ಮತ್ತು ಬಿಡುಗಡೆಯಾದ ಅನುದಾನ ಎಷ್ಟು; (ಜಿಲ್ಲಾವಾರು ಮತ್ತು ಯೋಜನೆವಾರು ಮಾಹಿತಿ ನೀಡುವುದು) | 2023-24 ರಿಂದ ಇಲ್ಲಿಯವರೆಗೆ ಒಟ್ಟು 7,41,717 ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ಈ ಗುರಿಗೆ ಎದುರಾಗಿ ಒಟ್ಟು 2,88,443 ಮನೆಗಳನ್ನು ಮಂಜೂರಾತಿ ನೀಡಲಾಗಿರುತ್ತದೆ. 5,920 ಮನೆಗಳು ಪೂರ್ಣಗೊಂಡಿರುತ್ತವೆ, 32,660 ಮನೆಗಳು ಪ್ರಗತಿಯಲ್ಲಿರುತ್ತವೆ, 2,49,485 ಮನೆಗಳು ಪ್ರಾರಂಭವಾಗಬೇಕಾಗಿದ್ದು, 378 ಮನೆಗಳು ವಿವಿಧ ಕಾರಣಗಳಿಂದ ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ ಹಾಗೂ 4,53,274 ಫಲಾನುಭವಿಗಳ ಮಂಜೂರಾತಿ ಪ್ರಗತಿಯಲ್ಲಿದೆ. **ಯೋಜನವಾರು ವಿವರ ಇಂತಿದೆ:** |

| ಯೋಜನೆ | ಹಂಚಿಕೆ | ಮಂಜೂರು | ಪೂರ್ಣ | ಒಟ್ಟು ಪ್ರಗತಿ | ಪ್ರಾರಂಭವಾಗಬೇಕಾಗಿರುವ ಮನೆಗಳು | ತಾತ್ಕಾಲಿಕವಾಗಿ ತಡೆಹಿಡಿಯಲಾದ ಮನೆಗಳು |
|---|---|---|---|---|---|---|
| ಬಸವ ವಸತಿ | 24513 | 6790 | 60 | 1352 | 5156 | 222 |
| ದೇವರಾಜು ಅರಸು ವಸತಿ - ನರ ಸಂತ್ರಸ್ತರು (ಗ್ರಾಮೀಣ ) | 2664 | 2664 | 20 | 423 | 2221 | 0 |
| ದೇವರಾಜು ಅರಸು ವಸತಿ - ನರ ಸಂತ್ರಸ್ತರು (ನಗರ) | 237 | 237 | 0 | 14 | 223 | 0 |
| ಡಾ. ಬಿ.ಆರ್. ಅಂಬೇಡ್ಕರ ನಿವಾಸ - ಗ್ರಾಮೀಣ | 8728 | 1898 | 10 | 414 | 1318 | 156 |
| ಪ್ರಧಾನ ಮಂತ್ರಿ ಆವಾಸ (ಗ್ರಾಮೀಣ) | 702731 | 274490 | 4843 | 29795 | 239852 | 0 |
| PM-JANMAN | 1580 | 1100 | 55 | 330 | 715 | 0 |
| ಪ್ರಧಾನ ಮಂತ್ರಿ ಆವಾಸ (ನಗರ) | 1264 | 1264 | 932 | 332 | 0 | 0 |
| ಒಟ್ಟು | 741717 | 288443 | 5920 | 32660 | 249485 | 378 |

ಜಿಲ್ಲಾವಾರು ಮತ್ತು ಯೋಜನವಾರು ವಿವರಗಳನ್ನು ಅನುಬಂಧ -1 ರಲ್ಲಿ ಒದಗಿಸಲಾಗಿದೆ.

2023-24 ರಿಂದ ಇಲ್ಲಿಯವರೆಗೆ ಕೇಂದ್ರ ಪುರಸ್ಕೃತ ಮತ್ತು ರಾಜ್ಯ ಪುರಸ್ಕೃತ ಯೋಜನೆಯಲ್ಲಿ ಹಂಚಿಕೆ ಯಾದ ಮನೆಗಳಿಗೆ ನಿರ್ಮಾಣ ಪ್ರಗತಿಗೆ ತಕ್ಕಂತೆ ರೂ.73661.45 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾದ ಯೋಜನೆವಾರು ವಿವರ ಇಂತಿದೆ:

(ರೂ.ಲಕ್ಷಗಳಲ್ಲಿ)

| ಯೋಜನೆ | ಬಿಡುಗಡೆಯಾದಮೊತ್ತ |
|---|---|
| ಡಾ| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನ(ಗ್ರಾಮೀಣ) | 156.97 |
| ದೇವರಾಜು ಅರಸು ವಸತಿ ಯೋಜನೆ- ನರ ಸಂತ್ರಸ್ತರು(ಗ್ರಾಮೀಣ ) | 182.15 |
| ದೇವರಾಜು ಅರಸು ವಸತಿ ಯೋಜನೆ- ನರ ಸಂತ್ರಸ್ತರು (ನಗರ) | 4.43 |
| ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) | 73317.90 |
| ಒಟ್ಟು | 73661.45 |

| | | |
|---|---|---|
| | | ಜಿಲ್ಲಾವಾರು ಮತ್ತು ಯೋಜನವಾರು ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ -2ರಲ್ಲಿ ಒದಗಿಸಲಾಗಿದೆ. |
| ಇ) | ಭೌತಿಕ ಪ್ರಗತಿ Upload ಮಾಡಿದ್ದರೂ ಸಹ ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದಲ್ಲಿ ಆಡಿಟ್ ಮಾಡುವುದಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು (ಜಿಲ್ಲಾವಾರ ಮತ್ತು ಯೋಜನೆವಾರು ಮಾಹಿತಿ ನೀಡುವುದು) | ಭೌತಿಕ ಪ್ರಗತಿಯಾಗಿ ವಿವಿಧ ವಸತಿ ಯೋಜನೆಗಳಡಿ ಭೌತಿಕ ಪ್ರಗತಿಯನ್ನು online ನಲ್ಲಿ Upload ಮಾಡಿದ ದಿನದಿಂದಲೇ ಆಡಿಟ್ ಮಾಡಲು ಕ್ರಮವಹಿಸಲಾಗುತ್ತಿದ್ದು, ಯಾವುದೇ ಬಾಕಿ ಇರುವುದಿಲ್ಲ. |
| ಈ) | ಮನೆ ಹಂಚಿಕೆ ಮಾಡಿ ವರ್ಷಗಳೆದರೂ ಸಹ ಇನ್ನೂ ಫಲಾನುಭವಿಗಳ ಆಯ್ಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಕಾಲಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡಲಾಗುವುದು? | ಗ್ರಾಮೀಣ ಪ್ರದೇಶಗಳಲ್ಲಿ ಫಲಾನುಭವಿಗಳನ್ನು ಗ್ರಾಮಸಭೆಯ ಮೂಲಕ ಹಾಗೂ ನಗರ ಪ್ರದೇಶಗಳಲ್ಲಿ ನಗರ ಆಶ್ರಯ ಸಮಿತಿಯ ಮೂಲಕ ಸರ್ಕಾರದಿಂದ ನಿಗಧಿಪಡಿಸುವ ಗುರಿಗಳ ಅನುಗುಣವಾಗಿ ಫಲಾನುಭವಿಗಳನ್ನು ಆಯ್ಕೆಮಾಡಲಾಗುತ್ತದೆ.<br><br>ಫಲಾನುಭವಿಗಳನ್ನು ಆಯ್ಕೆ ಮಾಡುವುದು ಗ್ರಾಮ ಪಂಚಾಯತಿ/ ನಗರ ಸ್ಥಳೀಯ ಸಂಸ್ಥೆ ಕರ್ತವ್ಯವಾಗಿದ್ದು, ನಿಗಧಿಪಡಿಸಿದ ಸಮಯದೊಳಗೆ ಫಲಾನುಭವಿಗಳನ್ನು ಆಯ್ಕೆ ಮಾಡಿ, ಪಟ್ಟಿ ಕಳುಹಿಸುವಂತೆ ಸೂಚನೆ ನೀಡಲಾಗಿದ್ದು, ಫಲಾನುಭವಿಗಳ ಆಯ್ಕೆ ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ವಇ 385 ಹೆಚ್ಎಂ 2025

B. Z. [signature]

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು